2025 III 05 0930 Seat No. | | | | | |

Time : 3 Hours **KANNADA (TL)**

**Subject Code**

| S | 1 | 1 | 3 | 6 |
|---|---|---|---|---|

**Total No. of Questions : 56 (Printed Pages : 10) Maximum Marks : 80**

ಸೂಚನೆ – (*i*) ಎಲ್ಲ ಪ್ರಶ್ನೆಗಳ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಿರಿ.

(*ii*) ಎಲ್ಲ ಪ್ರಶ್ನೆಗಳನ್ನು ಬಿಡಿಸುವುದು ಅವಶ್ಯಕವಾಗಿದೆ.

(*iii*) ಬಹು ಆಯ್ಕೆ ಪ್ರಶ್ನೆಗಳ ಸಂಖ್ಯೆಗಳು **1** ರಿಂದ **2, 11** ರಿಂದ **14, 28** ರಿಂದ **41.**

(*iv*) ಒಂದು ಅಂಕದ ಪ್ರಶ್ನೆಗಳ ಸಂಖ್ಯೆಗಳು **3** ರಿಂದ **10, 21** ರಿಂದ **24, 42** ರಿಂದ **46.**

(*v*) ಎರಡು – ಮೂರು ರು ವಾಕ್ಯದ ಪ್ರಶ್ನೆಗಳ ಸಂಖ್ಯೆಗಳು **25** ರಿಂದ **27.**

(*vi*) ಮೂರು – ನಾಲ್ಕು ವಾಕ್ಯದ ಪ್ರಶ್ನೆಗಳ ಸಂಖ್ಯೆಗಳು **15** ರಿಂದ **18.**

(*vii*) ನಾಲ್ಕು – ಐದು ವಾಕ್ಯದ ಪ್ರಶ್ನೆಗಳು ಸಂಖ್ಯೆಗಳು **19, 20.**

(*viii*) ರಚನೆಯ ಪ್ರಶ್ನೆ ಸಂಖ್ಯೆಗಳು **47** ರಿಂದ **49.**

(*ix*) ಗದ್ಯಖಂಡ ಲೇಖನದ ಪ್ರಶ್ನೆಗಳ ಸಂಖ್ಯೆಗಳು **50** ರಿಂದ **54.**

(*x*) ಕವಿತೆಯ ಸರಳ ಅರ್ಥದ ಪ್ರಶ್ನೆಗಳ ಸಂಖ್ಯೆಗಳು **55, 56.**

* **ಈ ಕೆಳಗೆ ಕೊಟ್ಟಿರುವ ಪರ್ಯಾಯ ವಾಕ್ಯಗಳಿಂದ ಸರಿಯಾದ ಒಂದನ್ನು ಆರಿಸಿ, ವಾಕ್ಯ ಪೂರ್ಣ ಮಾಡಿ ಬರೆಯಿರಿ.** 1×2=2

1. ಖರೀದಿ ಮಾಡಿದ ವ್ಯಾಪಾರಸ್ಥರು ರೇಷ್ಮೆ ಗೂಡುಗಳನ್ನು ತಕ್ಷಣ ಬಿಸಿ ನೀರಿನಲ್ಲಿ ಹಾಕುತ್ತಾರೆ ಏಕೆಂದರೆ...............

- ಬೇರೆಯವರು ಗೂಡುಗಳನ್ನು ಕೊಂಡುಕೊಳ್ಳಬಾರದು ಎಂದು.
- ಗುಡಿನೊಳಗೆ ಇದ್ದ ಕೀಡೆಯು ಪತಂಗವಾಗಿ ಗೂಡನ್ನು ಕತ್ತರಿಸಿ ಹೊರಗೆ ಬರುತ್ತದೆ.
- ಗೂಡುಗಳು ಕಳ್ಳತನವಾಗಬಹುದು ಎಂದು.

2. ರಾಧಾ ಪಶ್ಚಾತ್ತಾಪ ಪಟ್ಟು ತಾನು ಅನ್ಯಾಯಕ್ಕೆ ಅನೀತಿಗೆ ಪ್ರೋತ್ಸಾಹಿಸಿದೆ ನನ್ನನ್ನು ಕ್ಷಮಿಸಿರಿ ಎಂದು ಗಂಡನ ಬಳಿ ಕ್ಷಮೆ ಕೇಳಲು ಕಾರಣವನೆಂದರೆ .................

- ಅಕ್ಕ ಪಕ್ಕದವರು ಇವರ ವಿರುದ್ಧ ಅಸಹ್ಯವಾಗಿ ಮಾತನಾಡತೊಡಗಿದ್ದರಿಂದ.
- ಅವಳು ಮಾಡುತ್ತಿರುವ ತಪ್ಪನ್ನು ಗಂಡನು ತಿಳಿಸಿ ಹೇಳಿದ್ದರಿಂದ.
- ರಾಧಾಳಿಗೆ ನಿಯತ್ತಿನ ಮೌಲ್ಯ ತಿಳಿದಿದ್ದರಿಂದ.

* **ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು/ಕೇಳಿದರು.** 1×4=4

3. "ರಾಜು! ನಿಮ್ಮಿಂದ ನನಗೊಂದು ಸಹಾಯ ಆಗಬೇಕು ಅದಕ್ಕಾಗಿ ಬಂದಿದ್ದೇನೆ."

4. "ಉಳಿತಾಯ ಖಾತೆ ಎಂದರೇನು ಸರ್?."

5. "ಅಪ್ಪಾ, ಸಮತೋಲ ಆಹಾರ ಎಂದರೇನು ?"

6. "ಏನು ಹುಳಗಳಿಂದ ಸೀರೆ ತಯಾರಿಸುತ್ತಾರೆಯೇ!"

* **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** 1×4=4

7. ಸರ್. ಎಂ. ವಿಶ್ವೇಶ್ವರಯ್ಯನವರು ಜೋಗವನ್ನು ನೋಡಿ ಏನೆಂದು ಹೇಳಿದರು ?

8. ರೇಷ್ಮೆ ಹುಳುಗಳ ಬೆಳವಣಿಗೆ ಅವಸ್ಥೆಗಳಾವುವು ?

9. ಕಾರಂತರಿಗೆ ಯಾವುದೆಂದರೆ ಅಷ್ಟಕಷ್ಟೇ ಆಗಿತ್ತು ?

10. ಪರಮವೀರ ಚಕ್ರದ ರಚನೆಯನ್ನು ಮಾಡಿದವರು ಯಾರು ?

* **ಕಂಸದಲ್ಲಿ ಕೊಟ್ಟಿರುವ ಶಬ್ದಗಳಲ್ಲಿ ಯೋಗ್ಯವಾದ ಉತ್ತರವನ್ನು ಆರಿಸಿ ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿರಿ.**

½×4=2

11. ರಾಜು ತಂದೆಗೆ ———————— ರೂಪಾಯಿಗಳನ್ನು ಕಳಿಸಿದನು.

- ಐನೂರು
- ಒಂದು ಸಾವಿರ
- ನಾಲ್ಕುನೂರು
- ಹತ್ತು ಸಾವಿರ

12. ಶಿವಮೊಗ್ಗ ಜಿಲ್ಲೆಯಲ್ಲಿ ———— ನದಿ ಹರಿದಿದೆ.

- ಕೃಷ್ಣ
- ಶರಾವತಿ
- ಕಾವೇರಿ
- ಅಘನಾಶಿನಿ

13. ಸಾಬ್ರಿ ವಿಮಾನಗಳು ———— ನಗರದ ಮೇಲೆ ದಾಳಿ ಮಾಡಿದವು.

- ಶ್ರೀನಗರ
- ಜಮ್ಮು ಕಾಶ್ಮೀರ
- ದೆಹಲಿ
- ಲಡಾಕ್

14. ವಿಶ್ವ ಜನಸಂಖ್ಯಾ ದಿನ ಎಂದು ———— ರಂದು ಆಚರಿಸುತ್ತಾರೆ.

- ಅಕ್ಟೋಬರ್ 2
- ಆಗಸ್ಟ್ 15
- ಜೂನ್ 22
- ಜುಲೈ 12

* **ಕೆಳಗಿನ ಬೇಕಾದ ಮೂರು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** 3×3=9

15. ಗ್ರಾಮೀಣ ಬ್ಯಾಂಕಿನ ಕಾರ್ಯಗಳನ್ನು ವಿವರಿಸಿರಿ.

16. ಯಂಕಣ್ಣ ಮಾವನ ಮನೆಗೆ ಬಂದಾಗ ಅತ್ತೆ ಹೇಗೆ ಸೇವೆ ಮಾಡಿದಳು ?

17. ಹಂಪೆಯ ಮಹಾನವಮಿ ಹಬ್ಬದ ಕುರಿತು ಬರೆಯಿರಿ.

18. ಜಲ ಮಾಲಿನ್ಯ ಯಾವ ಯಾವ ಕಾರಣಗಳಿಂದ ಆಗುತ್ತದೆ ?

* **ಈ ಕೆಳಗಿನ ಯಾವುದೇ ಒಂದು ಪ್ರಶ್ನೆಗೆ ನಾಲ್ಕು ಅಥವಾ ಐದು ವಾಕ್ಯದಲ್ಲಿ ಉತ್ತರ ಬರೆಯಿರಿ.** 4×1=4

19. ಅಶೋಕ ತನ್ನ ಕೊನೆಯ ದಿನಗಳನ್ನು ಹೇಗೆ ಕಳೆದನು?

20. ಓಝೋನ್ ಪದರಿನ ನಾಶದಿಂದ ಉಂಟಾಗುವ ದುಷ್ಪರಿಣಾಮಗಳು ಯಾವುವು ?

* **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.** 4×1=4

21. ರಂಗನ ಮುರಳಿಯನ್ನು ಹೆಂಗಳೆಯರು ಯಾವಾಗ ನುಡಿಸುವರು ?

22. ತಾಯಿಯನ್ನು ನೋಡಲು ಆಕಾಶದಲ್ಲಿ ಯಾರು ನೆರೆದಿದ್ದಾರೆ ?

23. ಯಾವ ಯಾವ ಧರ್ಮಗಳ ಮಹಾನ್ ಸಾಗರ ನಮ್ಮ ದೇಶದಲ್ಲಿವೆ ?

24. ನರಜನ್ಮ ಯಾವಾಗ ಸಾರ್ಥಕವಾಗುತ್ತದೆ ?

* **ಈ ಕೆಳಗಿನ ಬೇಕಾದ ಎರಡು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯದಲ್ಲಿ ಉತ್ತರ ಬರೆಯಿರಿ.**

2×2=4

25. ಶ್ರೀ ಕೃಷ್ಣನ ನಾಮದ ಮಹತ್ವವನ್ನು ಕವಿ ಹೇಗೆ ತಿಳಿಸಿದ್ದಾರೆ ?

26. ಭೂಮಿಯ ಮೇಲೆ ಎಂತಹ ಎರಡು ಗುಣದ ಜನರು ಇದ್ದಾರೆ ?

27. ಬಿದರಿನ ಉಪಯೋಗಗಳು ಯಾವುವು ?

28. 'ಅಪಾರ' **ಈ ಶಬ್ದದ ಅರ್ಥ ಗುರುತಿಸಿ ಬರೆಯಿರಿ.** 1×1=1

- ಕಡಿಮೆ
- ಬಹಳಷ್ಟು
- ದುರ್ಲಭ
- ವಿರಳ

29. 'ನಿಕ್ಷೇಪ' **ಈ ಶಬ್ದದ ಅರ್ಥ ಗುರುತಿಸಿ ಬರೆಯಿರಿ.** 1×1=1

- ಹುದುಗಿಟ್ಟ ನಿಧಿ
- ಬಂಗಾರ
- ಅದಿರು
- ಕಬ್ಬಿಣ

* **ಕೆಳಗಿನ ವಿಶೇಷಣ ಶಬ್ದಗಳನ್ನು ಗುರುತಿಸಿ ಬರೆಯಿರಿ.**

30. ಹುಣ್ಣಿಮೆ ಚಂದ್ರನು ಗೋಲಾಕಾರವಾಗಿ ಕಾಣಿಸುವನು. 1×1=1

- ಚಂದ್ರ
- ಹುಣ್ಣಿಮ
- ಗೋಲಾಕಾರ
- ಕಾಣಿಸುವನು

31. ಉದ್ಯಾನವನದ ಪಾರಿಜಾತವು ಸುವಾಸನೆ ಭರಿತವಾದ ಹೂವಾಗಿದೆ. 1×1=1

- ಹೂವು
- ಸುವಾಸನೆ ಭರಿತ
- ಉದ್ಯಾನವನ
- ಪಾರಿಜಾತ

32. 'ದೇವರ್ಷಿ' **ಈ ಶಬ್ದದ ಸಂಧಿ ವಿಗ್ರಹಿಸಿ ಬರೆದ ರೂಪವನ್ನು ಗುರುತಿಸಿ ಬರೆಯಿರಿ.** 1×1=1

- ದೇವ + ಋಷಿ
- ದೇವ + ರ್ಷಿ
- ದೇವರು + ಋಷಿ
- ಋಷಿ + ದೇವ

33. 'ಬೆಟ್ಟದಾವರೆ' **ಈ ಶಬ್ದದ ಸಂಧಿ ವಿಗ್ರಹಿಸಿ ಬರೆದ ರೂಪವನ್ನು ಗುರುತಿಸಿ ಬರೆಯಿರಿ.** 1×1=1

- ಬೆಟ್ಟ + ವರೆ
- ಬೆಟ್ಟದ + ತಾವರೆ
- ಬೆಟ್ಟದ + ಅವರೇ
- ತಾವರೆ + ಬೆಟ್ಟ

34. **'ಪುಸ್ತಕ' ಈ ಶಬ್ದದ ಬಹುವಚನ ರೂಪವನ್ನು ಗುರುತಿಸಿ ಬರೆಯಿರಿ** 1×1=1

- ಪುಸ್ತಕಗಳು
- ಪುಸ್ತಿಕೆಗಳು
- ಪತ್ರಿಕೆಗಳು
- ಹಸ್ತ ಪತ್ರಿಕೆಗಳು

35. **'ಅಕ್ಕಂದಿರು' ಈ ಶಬ್ದದ ಏಕವಚನ ರೂಪವನ್ನು ಗುರುತಿಸಿ ಬರೆಯಿರಿ.** 1×1=1

- ಅಕ್ಕಗಳು
- ಅಮ್ಮ
- ಅಕ್ಕ
- ಅಕ್ಕರು

36. **'ಬಾಲಕ' ಈ ಶಬ್ದದ ಸ್ತ್ರೀಲಿಂಗ ರೂಪವನ್ನು ಗುರುತಿಸಿ ಬರೆಯಿರಿ.** 1×1=1

- ಬಾಲೆಯರು
- ಬಾಲಕಿ
- ಬಾಲಕಿಯರು
- ಬಾಲಕಿಗಳು

37. **'ಅವಳು' ಈ ಶಬ್ದದ ಪುಲ್ಲಿಂಗ ರೂಪವನ್ನು ಗುರುತಿಸಿ ಬರೆಯಿರಿ.** 1×1=1

- ಅವನು
- ಅವಳಿಗೆ
- ಅವರು
- ಅವುಗಳು

38. **'ಜ್ಞಾನ' ಈ ಶಬ್ದದ ವಿರುದ್ಧಾರ್ಥಕ ಶಬ್ದವನ್ನು ಗುರುತಿಸಿ ಬರೆಯಿರಿ.** 1×1=1

- ವಿಜ್ಞಾನ
- ಸುಜ್ಞಾನ
- ಅಜ್ಞಾನ
- ಕುಜ್ಞಾನ

39. **‘ಧರ್ಮ’ ಈ ಶಬ್ದದ ವಿರುದ್ಧಾರ್ಥಕ ಶಬ್ದವನ್ನು ಗುರುತಿಸಿ ಬರೆಯಿರಿ.** 1×1=1

- ಸುಧರ್ಮ
- ಅಧರ್ಮ
- ಅಧರಮ
- ಧರ್ಮವು

40. **‘ಆಕಾಶ’ ಈ ಶಬ್ದದ ಸಮನಾರ್ಥಕ ಶಬ್ದವನ್ನು ಗುರುತಿಸಿ ಬರೆಯಿರಿ.** 1×1=1

- ಆಗಸ
- ಧರೆ
- ಸೂರ್ಯ
- ಚಂದ್ರ

41. **‘ರಾಜ’ ಈ ಶಬ್ದದ ಸಮನಾರ್ಥಕ ಶಬ್ದವನ್ನು ಗುರುತಿಸಿ ಬರೆಯಿರಿ.** 1×1=1

- ಸೈನಿಕ
- ಕುಮಾರ
- ಯುವರಾಜ
- ಅರಸ

* **ಈ ಕೆಳಗಿನ ಶಬ್ದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.** 1×2=2

42. ಕೈತೋಟ

43. ಗೌರವ

* **ಈ ಕೆಳಗಿನ ಬೇಕಾದ ಎರಡು ಗಾದೆ ಮಾತುಗಳ ಸರಳ ಅರ್ಥ ಬರೆಯಿರಿ.** 1×2=2

44. ತುಂಬಿದ ಕೊಡ ತುಳುಕುವದಿಲ್ಲ.

45. ಊರಿಗೆ ಅರಸನಾದರೂ, ತಾಯಿಗೆ ಮಗ.

46. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.

***　ಕೆಳಗಿನವುಗಳಲ್ಲಿ ಯಾವುದೇ ಒಂದು ವಿಷಯದ ಕುರಿತು ಹದಿನೈದು – ಇಪ್ಪತ್ತು ವಾಕ್ಯಗಳಲ್ಲಿ ನಿಬಂಧ ಬರೆಯಿರಿ.**

6×1=6

47. • ನದಿಯ ಆತ್ಮಕಥೆ

**(ಅಥವಾ)**

• ಸಮುದ್ರ ದಂಡೆಯಲ್ಲಿ ಒಂದು ಸಂಜೆ

**(ಅಥವಾ)**

• ಬಾಲ ಗಂಗಾಧರ ತಿಲಕ

***　ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** 6×1=6

48. • ಸುಮಾ/ಸುರೇಶ್ ಹಿರೇಮಠ, ರಾಜ ಅಪಾರ್ಟಮೆಂಟ್, ಮನೆ ನಂ. 20, ಕಲ್ಯಾಣನಗರ, ಫೊಂಡಾ ಇವನು/ಇವಳು ಹಳ್ಳಿಯಲ್ಲಿ ವಾಸಿಸುವ ತನ್ನ ತಾಯಿಗೆ ತನ್ನ ಶಿಕ್ಷಣದ ಪ್ರಗತಿಯ ಕುರಿತು ಬರೆಯುವ ಮಾದರಿಯಲ್ಲಿ ಒಂದು ಪತ್ರ ಬರೆಯಿರಿ.

**(ಅಥವಾ)**

• ನವೀನ್/ ನಂದಿನಿ ಶೆಟ್ಟಿ ಮನೆ ನಂ. 40, ಶಾಸ್ತ್ರಿ ನಗರ. ಬಿಚೋಲಿ, ಗೋವಾ ಇವನು/ಇವಳು ಅಂಚೆ ಕಚೇರಿಯಲ್ಲಿ ಉಳಿತಾಯ ಖಾತೆಯನ್ನು ಪ್ರಾರಂಭಿಸುವ ಕುರಿತು ಪೋಸ್ಟ್ ಮಾಸ್ಟರ, ಪ್ರಧಾನ ಅಂಚೆ ಕಚೇರಿ ಪಣಜಿ ಗೋವಾ ಇವರಿಗೆ ಬರೆಯುವ ಮಾದರಿಯಲ್ಲಿ ಒಂದು ಪತ್ರ ಬರೆಯಿರಿ.

***　ಕೆಳಗಿನ ವಾಕ್ಯಗಳ ಸಹಾಯದಿಂದ ಒಂದು ಸ್ವತಂತ್ರವಾದ ಕಥೆಯನ್ನು ರಚಿಸಿ ಬರೆಯಿರಿ ಮತ್ತು ಯೋಗ್ಯತಲೆ ಬರಹ ನೀಡಿರಿ.** 6×1=6

49. ಒಂದು ಇರುವೆಯು ನದಿ ದಂಡೆಯ ಮೇಲಿಂದ ............. ಮರದ ಮೇಲಿರುವ ಪಾರಿವಾಳವು ನೋಡಿ .......... ಎಲೆಯನ್ನು ಇರುವೆಯ ಸಮೀಪದಲ್ಲಿ ಒಗೆದಾಗ ............ ಇರುವೆಯು ಹತ್ತಿಕೊಂಡು ............. ಪ್ರಾಣ ಉಳಿಯಿತು. ಕೆಲವು ದಿನಗಳ ನಂತರ ............ ಬೇಟೆಗಾರನು ಗುರಿ ಇಟ್ಟನು. ಗೆಳೆಯನ ಪ್ರಾಣ ಉಳಿಸಲು ............... ಇರುವೆ ಬೇಟೆಗಾರನ ಕಾಲಿಗೆ ಕಚ್ಚಿತು .................. ಗುರಿ ತಪ್ಪಿತು. ಪಾರಿವಾಳದ ಪ್ರಾಣ ಉಳಿಯಿತು.

* **ಕೆಳಗಿನ ಗದ್ಯ ಭಾಗವನ್ನು ಓದಿ ಆದರೆ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

ಸ್ವಾತಂತ್ರ್ಯ ಪೂರ್ವದಲ್ಲಿ ಹರಿದು ಹಂಚಿಹೋಗಿದ್ದ ಭಾರತವನ್ನು ಒಂದುಗೂಡಿಸಿ ಸಂಸ್ಥಾನಗಳನ್ನು ವಿಲೀನಗೊಳಿಸಿ ಎಲ್ಲರನ್ನೂ ಒಂದೇ ಸೂರಿನಡಿನಲ್ಲಿ ತರಲು ಶ್ರಮಿಸಿದವರು ಸರ್ದಾರ್ ವಲ್ಲಭಭಾಯಿ ಪಟೇಲರು.

ಕ್ರಿ.ಶ. 1947 ಆಗಸ್ಟ್ 15 ರಂದು ಭಾರತಕ್ಕೆ ಸ್ವಾತಂತ್ರ್ಯ ದೊರಕಿತು. ವಲ್ಲಭಭಾಯಿ ಅವರು ಸ್ವತಂತ್ರ ಭಾರತದ ಪ್ರಥಮ ಗೃಹ ಮಂತ್ರಿಯಾದರು. ಅಖಂಡ ಭಾರತದ ನಿರ್ಮಾಣದಲ್ಲಿ ವಲ್ಲಭಭಾಯಿ ಪಟೇಲರು ಬಹು ಮುಖ್ಯ ಪಾತ್ರ ವಹಿಸಿದರು. ಎಲ್ಲಾ ಸಂಸ್ಥಾನಗಳನ್ನು ಒಗ್ಗೂಡಿಸಲು ಶ್ರಮಿಸಿದರು. ಸಂಸ್ಥಾನ ವಿಲೀನಿಕರಣಕ್ಕೆ ಹೈದರಾಬಾದ್ ನಿಜಾಮನು, ಜುನಾಗಡದ ನವಾಬ ಮತ್ತು ಕಾಶ್ಮೀರದ ರಾಜ ಇವರು ಒಪ್ಪಲಿಲ್ಲ. ನಿಜಾಮನನ್ನು ಬಗ್ಗು ಬಡಿಯಲು ಸೈನ್ಯ ಪ್ರವೇಶಿಸುವಂತೆ ಮಾಡಿದರು. ಆಗ ನಿಜಾಮನು ಸಂಸ್ಥಾನಗಳ ವಿಲೀನಿಕರಣಕ್ಕೆ ಒಪ್ಪಿದನು. ಪಟೇಲರ ಸಾಹಸವನ್ನು ಕಂಡು ನವಾಬ ಮತ್ತು ಕಾಶ್ಮೀರ ರಾಜ ಹೆದರಿ ವಿಭಜನೆಗೆ ಒಪ್ಪಿಗೆ ನೀಡಿದರು. ಈ ರೀತಿಯಾಗಿ ದೇಶದ ಐಕ್ಯತೆ ಮತ್ತು ಅಖಂಡತೆಗೆ ಸರದಾರರ ಕೊಡುಗೆ ಅಪಾರವಾಗಿದೆ.

ಸರದಾರರು ದೇಶದ ಐಕ್ಯತೆಗಾಗಿ ಗಾಂಧೀಜಿಯವರ ಮಾತಿನಂತೆ ನಡೆದರು. ಗಾಂಧೀಜಿಯವರ ಹತ್ಯೆಯ ಸುದ್ದಿ ಕೇಳಿ ಮಗುವಿನಂತೆ ಅತ್ತರು. ಭಾರತದ ಐಕ್ಯತೆ ಹಾಗೂ ಸಮಗ್ರತೆಗಾಗಿ ಶ್ರಮಿಸಿದರು. ಬಿಡುವಿಲ್ಲದ ಕಾರ್ಯಗಳು ಹೆಚ್ಚಾಗಿ ಸರದಾರರ ದೇಹಾರೋಗ್ಯ ಕ್ಷೀಣಿಸಿತು. ತಮ್ಮ 70ನೇ ವಯಸ್ಸಿನಲ್ಲಿ ಅಂದರೆ 15 ಡಿಸೆಂಬರ್ 1950 ರಲ್ಲಿ ಮುಂಬೈಯಲ್ಲಿ ವಿಧಿವಶರಾದರು.

ಭಾರತವು ಕ್ರಿ.ಶ. 1991 ಜೂನ್ 17 ರಂದು ಮರಣೋತ್ತರವಾಗಿ 'ಭಾರತ ರತ್ನ' ಪುರಸ್ಕಾರವನ್ನು ನೀಡಿ ಗೌರವಿಸಿತು. ಸರದಾರರು ಉತ್ತಮ ಕಾರ್ಯದಕ್ಷತೆಯುಳ್ಳವರು, ಶಿಸ್ತು ಪ್ರಿಯರು ಆಗಿದ್ದರು. ದೇಶದ ಐಕ್ಯತೆ ಹಾಗೂ ಅಖಂಡತೆಯ ಮಹಾಶಿಲ್ಪಿ ಎಂದು ಅವರ ಹೆಸರು ಚಿರಸ್ಮರಣೀಯವಾಗಿದೆ.

**ಪ್ರಶ್ನೆಗಳು :**

50. ಭಾರತಕ್ಕೆ ಯಾವಾಗ ಸ್ವಾತಂತ್ರ್ಯ ದೊರಕಿತು ? 1×1=1

51. ಸಂಸ್ಥಾನಗಳನ್ನು ಒಗ್ಗೂಡಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ ? 1×1=1

52. ಸರದಾರರು ದೇಶದ ಐಕ್ಯತೆಗಾಗಿ ಯಾರ ಮಾತಿನಂತೆ ನಡೆದರು ? 1×1=1

53. ವಲ್ಲಭಭಾಯಿ ಪಟೇಲರು ಎಷ್ಟನೇ ವಯಸ್ಸಿನಲ್ಲಿ ವಿಧಿವಶರಾದರು ? 1×1=1

54. ವಲ್ಲಭಭಾಯ್ ಪಟೇಲರಿಗೆ ಭಾರತ ರತ್ನ ಪ್ರಶಸ್ತಿಯನ್ನು ಯಾವಾಗ ನೀಡಿ ಗೌರವಿಸಿದರು ? 1×1=1

* **ಈ ಕೆಳಗಿನ ಕವಿತೆಗಳ ಸರಳ ಅರ್ಥ ಬರೆಯಿರಿ.**

55. ಹಂತಿಯ ಹೊಡೆಯುವ ಕಂಕಿಯ ತೆಗೆಯುವ : 3×1=3

ಬೆಳಗಿನವರೆಗೂ ಹಾಡುವರು

ಕಾಳನು ತೂರುತ ಗಾಡಿಗೆ ಹೇರುತ

ಊರಿನ ಕಡೆಗೆ ಓಡುವರು.

56. ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ : 3×1=3

ಸುಟ್ಟರೆ ನೊಸಲಿಗೆ ವಿಭೂತಿಯಾದ

ತಟ್ನದೇ ಹಾಕಿದರೆ ಮೇಲು ಗೊಬ್ಬರವಾದ

ನೀನಾರಿಗಾದೆಯೋ ಎಲೆ ಮಾನವ !